ಆರ್. ಡಬ್ಲ್ಯೂ ಃ **2 -**

ಸಾಕ್ಷಿಗೆ ದಿನಾಂಕಃ **03.02.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಅರ್ಜಿದಾರರ ಪರ : ವಕೀಲರ ಮೂಲಕ:</u>

ನನ್ನ ಸ್ವಂತ ಸ್ಥಳ ಹಿಟ್ಟನಹಳ್ಳಿ ಗ್ರಾಮ ಎಂದರೆ ಸರಿ. ನಾನು ವಿಮಾ ಪ್ರತಿನಿಧಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ನನಗೆ ಅರ್ಜಿದಾರರು ಗೊತ್ತು. ನನ್ನ ಅಜ್ಜಿಯನ್ನು ಅವರ ತಾತನಿಗೆ 2 ನೇ ಪತ್ನಿಯಾಗಿ ಮದುವೆ ಮಾಡಿಕೊಟ್ಟಿದ್ದ ಕಾರಣ ಸದರಿಯವರ ಪರಿಚಯವಿದೆ. ಸಂಬಂಧದಲ್ಲಿ ಅವರು ಏನು ಆಗಬೇಕೆಂಧು ನನಗೆ ಹೇಳಲು ಆಗುವುದಿಲ್ಲ, ಏಕೆಂದರೆ 2-3 ತಲೆಮಾರಿನವರು ಆಗಿರುತ್ತಾರೆ. ನನ್ನ ತಾತನ ಹೆಸರು ನಂಜೇಗೌಡ ಮತ್ತು ಅಜ್ಜಿಯ ಹೆಸರು ಚೆನ್ನಮ್ಮ ಆಗಿರುತ್ತದೆ. ನನ್ನ ತಾತ ನಂಜೇಗೌಡರವರ ತಂದೆಯ ಹೆಸರು ನನಗೆ ನೆನಪಿರುವುದಿಲ್ಲ. ಚೆನ್ನಮ್ಮ ರವರ ತಂದೆ ಹೆಸರು ಚೆನ್ನೇಗೌಡ ಎಂದು ನನ್ನ ತಂದೆ ಹೇಳುತ್ತಿದ್ದ ಕಾರಣ ಗೊತ್ತಾಗಿದ್ದು, ಅವರ ತಾಯಿಯ ಹೆಸರು ನನಗೆ ಗೊತ್ತಿರುವುದಿಲ್ಲ. ಈ ದಿನ ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಎದುರುದಾರರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾನು ಎದುರುದಾರರ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಇರುತ್ತದೆ. ನಂಜೇಗೌಡರವರಿಗೆ ಒಬ್ಬರೇ ಪತ್ನಿ ಎಂದು ರುಜುವಾತು ಪಡಿಸಲು ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿದ್ದು, ಆದರೆ ನಂಜೇಗೌಡರವರಿಗೆ ಇಬ್ಬರು ಪತ್ನಿಯರು ಇರುತ್ತಾರೆ. ತಹಶೀಲ್ದಾರ್, ನಾಗಮ್ಮ ಹಾಗೂ ಸಾವಿತ್ರಮ್ಮ ರವರ ವಿರುದ್ಧ ಈ ಅರ್ಜಿಯನ್ನು ಸಲ್ಲಿಸಲಾಗಿದೆ. 1 ನೇ ಎದುರುದಾರರ ಗಂಡನ ಹೆಸರು ಹೇಳಲು ಆಗುವುದಿಲ್ಲ. ಸದರಿಯವರಿಗೆ ಮಕ್ಕಳು ಇರುವುದಿಲ್ಲ, ಮದುವೆಯಾದ 02 ವರ್ಷಕ್ಕೆ ವಿಚ್ಛೇದನ ಆಗಿರುತ್ತದೆ. 2 ನೇ ಎದುರುದಾರರಿಗೆ 3 ಜನ ಮಕ್ಕಳು ಇದ್ದು, ಅವರಲ್ಲಿ ವೆಂಕಟೇಶ್ ಎಂಬ ಮಗನ ಹೆಸರು ಮಾತ್ರ ಗೊತ್ತಿರುತ್ತದೆ. 2 ನೇ ಎದುರುದಾರರ ಪತಿಯ ಹೆಸರು ನನಗೆ ಗೊತ್ತಿರುವುದಿಲ್ಲ. ಎದುರುದಾರರು ನನಗೆ ದೂರದ ಸಂಬಂಧಿಕರು ಆಗಬೇಕೆಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದು, ವರಸೆಯಲ್ಲಿ ಏನು ಸಂಬಂಧಿಕರು ಆಗಬೇಕೆಂದು ಬರೆಸಿಲ್ಲ ಎಂದರೆ ಸರಿ. ಎದುರುದಾರರು ನನ್ನ ಸಂಬಂಧಿಕರಾಗದ ಕಾರಣ ಆ ಬಗ್ಗೆ ಬರೆಸಿಲ್ಲ ಎಂದರೆ ಸರಿಯಲ್ಲ. ಸದರಿಯವರು ನನ್ನ ಸಂಬಂಧಿಕರು ಎಂದುಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು 60 ವರ್ಷಗಳಿಂದ ನನಗೆ ಪರಿಚಯಸ್ಥರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮಾದಯ್ಯ ಮತ್ತು ನಂಜಮ್ಮ ರವರು ಅಣ್ಣ ತಂಗಿ ಆಗಬೇಕು ಎಂದರೆ ಗಂಡ ಹೆಂಡತಿಯಾಗಿರುತ್ತಾರೆ. ಅರ್ಜಿದಾರರ ತಂದೆಯನ್ನು ಮಾದಯ್ಯ @ ಮಾದೇಗೌಡ ಎಂದು

ಕರೆಯುತ್ತಿದ್ದರು ಎಂದರೆ ಸರಿ. ನಂಜಮ್ಮರವರು ಮಾದಯ್ಯ @ ಮಾದೇಗೌಡರವರಿಗೆ ಸ್ವಂತ ತಂಗಿಯಾಗಬೇಕು ಎಂದರೆ ಮಲತಾಯಿ ಮಗಳು ಆಗಿರುತ್ತಾರೆ. ನಂಜೇಗೌಡರವರಿಗೆ ಒಬ್ಬರೇ ಪತ್ನಿ ಚೆನ್ನಮ್ಮ ಎಂಬುವವರು ಇದ್ದರು ಎಂದರೆ ಇಬ್ಬರು ಪತ್ನಿಯರು ಇದ್ದರು. ನಂಜೇಗೌಡರವರಿಗೆ 2ನೇ ಮದುವೆಯಾಗಿರಲಿಲ್ಲ ಅವರಿಗೆ ಮಾದಮ್ಮ ಎಂಬುವವರು ಯಾವುದೇ ರೀತಿಯಲ್ಲಿ ಸಂಬಂಧ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಮಾದಮ್ಮ ರವರು ನಂಜೇಗೌಡರವರ ಮೊದಲ ಪತ್ನಿ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಂಜೇಗೌಡರವರಿಗೆ ಮಾದಮ್ಮ ಎಂಬುವವರು ಪತ್ನಿ ಇಲ್ಲದ ಕಾರಣ ನಾನಾಗಲಿ ಅಥವಾ ಎದುರುದಾರರಾಗಲಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

4. ನಂಜೇಗೌಡ ಮತ್ತು ಚೆನ್ನಮ್ಮರವರ ವಂಶವೃಕ್ಷದ ಬಗ್ಗೆ ನನಗೆ ಗೊತ್ತಿರುತ್ತದೆ. ನಂಜೇಗೌಡರವರ ತಂದೆ ತಾಯಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಂಜೇಗೌಡ ಮತ್ತು ಚೆನ್ನಮ್ಮರವರಿಗೆ ಒಬ್ಬರೇ ಮಗಳು ಇರುತ್ತಾರೆ. ಸದರಿ ಮಗಳನ್ನು ಚೆನ್ನಮ್ಮರವರು ಅವರ ಮನೆಯಲ್ಲಿಯೇ ಇರಿಸಿಕೊಂಡು ಅಳಿಯನನ್ನು ದತ್ತು ತೆಗೆದುಕೊಂಡಿದ್ದರು. ಆ ಸಂಬಂಧವಾಗಿ ದಾಖಲೆ ಇರುವುದಿಲ್ಲ. ಸದರಿ ಅಳಿಯನ ಹೆಸರು ಮರಿಮಾದೇಗೌಡ ಆಗಿರುತ್ತದೆ. ಆ ರೀತಿ ದತ್ತು ತೆಗೆದುಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ವಂಶವೃಕ್ಷದ ಪ್ರತಿಯನ್ನು ನಾನು ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ನಾನು ಎ.ಸಿ. ರವರ ನ್ಯಾಯಾಲಯದ ಮೇಲ್ಮನವಿಯಲ್ಲಿ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಮೇಲ್ಮನವಿಯನ್ನು ಮಂಚಿಗಯ್ಯರವರು ಮಳವಳ್ಳಿ ತಹಶೀಲ್ದಾರ್, ಸಾವಿತ್ರಮ್ಮ ಮತ್ತು ನಾಗಮ್ಮರವರ ವಿರುದ್ಧ ಸಲ್ಲಿಸಿದ್ದರು. ಸದರಿ ಮೇಲ್ಮನವಿಯಲ್ಲಿ ಖಾತೆಯನ್ನು ರದ್ದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಪ್ರಕರಣದ ಆದೇಶದ ಪ್ರತಿಯನ್ನು ನೋಡಿಲ್ಲದೇ ಇರುವ ಕಾರಣ ಅದರ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

5. ನಂಜೇಗೌಡ ಮತ್ತು ಮಾದಮ್ಮ ರವರ ಬಗ್ಗೆ ನಾನು ಗ್ರಾಮದಲ್ಲಿ ವಿಚಾರಿಸಿದಾಗ ಮಾದೇಗೌಡ ಹುಟ್ಟಿದ ತಕ್ಷಣ ಮಾದಮ್ಮ ರವರು ಮೃತರಾಗಿರುತ್ತಾರೆ ಎಂದು ನಂತರ ಚೆನ್ನಮ್ಮರವರನ್ನು ವಿವಾಹವಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಮಾದಮ್ಮ ರವರು ಹಿರಿಯ ಪತ್ನಿ ಎಂಬ ಬಗ್ಗೆ ನನಗೆ ಖುದ್ದಾಗಿ ಗೊತ್ತಿರುವುದಿಲ್ಲ. ಮಾದಮ್ಮರವರು ಮಳವಳ್ಳಿಯ ಪೇಟೆ ಬೀದಿಯವರು ಎಂದು ನನಗೆ ಗೊತ್ತಾಗಿದ್ದು, ಅವರ ವಿವಾಹ ಯಾವಾಗ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿಯವರು ಯಾವಾಗ ಮೃತರಾಗಿರುತ್ತಾರೆ ಎಂದು ತಿಳಿದುಕೊಂಡಿರುವುದಿಲ್ಲ. ಚೆನ್ನಮ್ಮರವರ ಮದುವೆಯಾಗಿ ಸುಮಾರು 85 ವರ್ಷಗಳು ಕಳೆದಿದ್ದು, ಅವರು 35 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ಮಾದಮ್ಮರವರು ನಂಜೇಗೌಡರವರ ಪತ್ನಿಯಲ್ಲದ ಕಾರಣ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚೆನ್ನಮ್ಮ ಮತ್ತು ನಂಜೇಗೌಡರವರಿಗೆ ಇಬ್ಬರು

ಮಕ್ಕಳು ಇದ್ದು, ಅವರು ಅರ್ಜಿದಾರರ ತಂದೆ ಮತ್ತು ಎದುರುದಾರರ ತಾಯಿ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ವಂಶವೃಕ್ಷದಲ್ಲಿ ನಂಜೇಗೌಡರವರಿಗೆ ಇಬ್ಬರು ಪತ್ನಿಯರು ಎಂದು ತೋರಿಸಿಲ್ಲ ಎಂದರೆ ಸರಿ. ಆದರೆ ಯಾವ ಕಾರಣಕ್ಕಾಗಿ ಆ ರೀತಿ ತೋರಿಸಿಲ್ಲ ಎಂದು ನನಗೆ ಗೊತ್ತಿರುವುದಿಲ್ಲ. ದಿ: 10.06.1990 ರಂದು ಚೆನ್ನಮ್ಮರವರು ಮೃತರಾಗಿರುತ್ತಾರೆ ಎಂದು ನಂಜಮ್ಮರವರು ಕಂದಾಯ ಅಧಿಕಾರಿಗೆ ಪ್ರಮಾಣ ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಎದುರುದಾರರ ಜೊತೆಗೆ ಸೇರಿ ಅರ್ಜಿದಾರರಿಗೆ ಸೇರಿದ ಸ್ವತ್ತನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಮತ್ತು ಎದುರುದಾರರಿಗೆ ಸಂಬಂಧಿಕ ಆಗದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.